# ವ್ಯಾಸರಾಯರ ಚರಣ - ವ್ಯಾಸರಾಜ ಸುಳಾದಿ

**(ವ್ಯಾಸರಾಯರ ಸುಳಾದಿ)**

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru.
3. **Note:** The wordings in both the above books are fully matching.
4. **Ref.:** Purandara Dasara Suladigalu – Edited by Shri Pavanje Gururao, Sriman Madhwa Siddantha Granthalaya, Udupi (1927). These wordings are given in yellow highlights.
5. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao. The lyrics here are same as in Ref. 4.
6. **Note:** The wordings followed by the singer are slightly different from the above reference books. But, most part of the wordings are similar to Ref. 1

**ರಾಗ: ತಿಲಂಗ್**

**ಧ್ರುವ ತಾಳ**

| | |
|---|---|
| ವ್ಯಾಸರಾಯರ ಚರಣಕಮಲ ದರ್ಶನವೆನ - | ವ್ಯಾಸರಾಯರ ಚರಣ ಕಮಲ ದರುಶನವೆನಗೆ |
| ಗೇಸು ಜನ್ಮದ ಸುಕೃತ ಫಲ ದೊರಕಿತೊ ಎನ್ನ | ಯೇಸು ಜನ್ಮದ ಸುಕೃತ ಫಲದಿ ದೊರಕಿತೋ ಯೆನ್ನ |
| ಸಾಸಿರ ಕುಲಕೋಟಿ ಪಾವನವಾಯಿತು | ಸಾಸಿರ ಕುಲಕೋಟಿ ಪಾವನ್ನವಾಯಿತು |
| ಶ್ರೀಶನ ಭಜಿಸುವುದಕ್ಕಧಿಕಾರಿ ನಾನಾದೆ | ಶ್ರೀಶನ ಭಜಿಸುವಡಧಿಕಾರಿ ನಾನಾದೆ |
| ದೋಷರಹಿತನಾದೆ ಪುರಂದರ ವಿಠ್ಠಲನ್ನ | ದೋಷ ವಿರಹಿತನಾದ ಪುರಂದರಾ ವಿಠಲನ್ನ |
| ದಾಸರ ಕರುಣವು ಎನ್ನ ಮೇಲಿರಲಿಕ್ಕೆ ॥ 1 ॥ | ದಾಸರಾ ಕರುಣವು ಯೆನಮ್ಯಾಲೆ ಇರಲಾಗಿ |

**ಮಟ್ಟತಾಳ**

| | |
|---|---|
| ಗುರು ಉಪದೇಶವಿಲ್ಲದ ಜ್ಞಾನವು | ಗುರುವುಪದೇಶವಿಲ್ಲದಾ ಮಂತ್ರ |
| ಗುರು ಉಪದೇಶವಿಲ್ಲದ ಸ್ನಾನವು | ಗುರುವುಪದೇಶವಿಲ್ಲದಾ ಭಕ್ತಿ |

| | |
|---|---|
| ಗುರು ಉಪದೇಶವಿಲ್ಲದ ಧ್ಯಾನವು | ಗುರುವುಪದೇಶವಿಲ್ಲದಾ ಕ್ರಿಯೆಗಳು |
| ಗುರು ಉಪದೇಶವಿಲ್ಲದ ಜಪವು | ಉರಗನಾ ವುಪವಾಸದಂತೆ ಕಾಣಿರೋ |
| ಗುರು ಉಪದೇಶವಿಲ್ಲದ ತಪವು | ಗುರುವ್ಯಾಸರಾಯರ ವರವೆಂದೆನಿಸಿ |
| ಗುರು ಉಪದೇಶವಿಲ್ಲದ ಮಂತ್ರ | ವರಮಹಾ ಮಂತ್ರವುಪದೇಶಿತಾನಾಗಿ |
| ಗುರು ಉಪದೇಶವಿಲ್ಲದ ತಂತ್ರ | ಪುರಂದರ ವಿಠಲ ಪರನೆಂದೆನಿಸಿ |
| ಉರಗನ ಉಪವಾಸದಂತೆ ಕಾಣಿರೋ | ದುರಿತ ಭಯಗಳೆಲ್ಲ ಪರಿಹರಿಸಿದನಾಗಿ |
| ಗುರು ವ್ಯಾಸರಾಯರೆ ಕರುಣದಿಂದಲಿ ಎನಗೆ | |
| ಪುರಂದರ ವಿಠ್ಠಲನೇ ಪರನೆಂದರುಹಿ | |
| ದುರಿತ ಭಯವೆಲ್ಲ ಪರಿಹರಿಸಿದರಾಗಿ | |
| ವರ ಮಹಾ ಮಂತ್ರ ಉಪದೇಶಿಸಿದರಾಗಿ ॥ 2 ॥ | |

**ರೂಪಕ ತಾಳ**

| | |
|---|---|
| ಅಂಕಿತವಿಲ್ಲದ ದೇಹ ನಿಷೇಧ | ಅಂಕಿತವಿಲ್ಲದ ದೇಹ ನಿಷಿದ್ಧ |
| ಅಂಕಿತವಿಲ್ಲದ ಕಾವ್ಯ ಶೋಭಿಸದು | ಅಂಕಿತವಿಲ್ಲದ ಕಾಯ ಶೋಭಿಸದು |
| ಅಂಕಿತವಿಲ್ಲದೆ ಇರಬಾರದೆಂದು ಚ - | ಅಂಕಿತವಿಲ್ಲದೆ ಇರಬಾರದೆಂದು ಎನಗೆ ಚ |
| ಕ್ರಾಂಕಿತವನು ಮಾಡಿ ಎನ್ನಂಗಕೆ | ಕ್ರಾಂಕಿತವನು ಮಾಡಿ ಯೆನಗೆ |
| ಪಂಕಜನಾಭ ಶ್ರೀ ಪುರಂದರ ವಿಠ್ಠಲನ | ಪಂಕಜನಾಭ ಪುರಂದರ ವಿಠಲನ್ನ |
| ಅಂಕಿತವೆನಗಿತ್ತ ಗುರು ವ್ಯಾಸ ಮುನಿರಾಯ ॥ 3 ॥ | ಅಂಕಿತವೆನಗಿತ್ತ ಗುರು ವ್ಯಾಸಮುನಿ ರಾಯಾ |

**ಝಂಪೆ ತಾಳ**

| | |
|---|---|
| ನ್ಯಾಯಾಮೃತ ತರ್ಕ ತಾಂಡವ ಚಂದ್ರಿಕೆ | ನ್ಯಾಯಾಮೃತ ತರ್ಕತಾಂಡವ ಚಂದ್ರಿಕೆ ಮೊದಲಾದ |
| ನ್ಯಾಯ ಗ್ರಂಥವ ರಚಿಸಿ ತನ್ನ ಭಕ್ತರಿಗಿತ್ತು | ನ್ಯಾಯ ಗ್ರಂಥಗಳ ರಚಿಸಿ ತನ್ನಯ ಭಕ್ತರಿಗಿತ್ತೆ |
| ಮಾಯಾವಾದಿ ಮೊದಲಾದಿಪ್ಪತ್ತೊಂದು ಕುಭಾಷ್ಯರ | ಮಾಯಾವಾದಿ ಮೊದಲಾದ ಇಪ್ಪತ್ತೊಂದು ಕುಭಾಷ್ಯದವರಾ |
| ಬಾಯಿ ಮುಚ್ಚಿಸಿದೆ ಮಧ್ವರಾಯರ ಕರುಣದಿಂದ | ಬಾಯ ಮುಚ್ಚಿಸಿದೆ ಮಧ್ವರಾಯರ ಕರುಣದಿಂದ |
| ಶ್ರೀಯರಸ ಪುರಂದರ ವಿಠ್ಠಲನ ದಾಸರೊಳು | ಸಿರಿಯರಸ ಪುರಂದರಾ ವಿಠಲನ್ನ ಭಕ್ತರೊಳು |
| ನಾಯಕನೆಂದೆನಿಸಿದೆ ಗುರು ವ್ಯಾಸ ಮುನಿ ರಾಯ ॥ 4 ॥ | ನಾಯಕನೆನಿಸಿಕೊಂಡೆ ರಾಯ ಗುರು ವ್ಯಾಸಮುನಿಯೆ |

**ತ್ರಿವಿಡಿ ತಾಳ**

ಶೇಷಾವೇಶ ಪ್ರಹ್ಲಾದನವತಾರವೆನಿಸಿದೆ
ವ್ಯಾಸರಾಯನೆಂಬ ಪೆಸರು ನಿನಗೆಂದಂತೆ
ದೇಶಾಧಿಪಗೆ ಬಂದ ಕುಹುಯೋಗವನು ನೂಕಿ
ನೀ ಸಿಂಹಾಸನವೇರಿ ಮೆರೆದೆ ಜಗವರಿಯೆ
ವ್ಯಾಸಾಬ್ಧಿಯನು ಬಲಿಸಿ ಕಾಶೀ ದೇಶದೊಳೆಲ್ಲ
ಭಾಸುರ ಕೀರ್ತಿಯನು ಪಡೆದೆ ನೀ ಗುರುರಾಯ
ವಾಸುದೇವ ಪುರಂದರ ವಿಠ್ಠಲನ ದಾಸರೊಳು
ಲೇಶ ನಿನ್ನಂತೆ ವೆಗ್ಗಳರ ಕಾಣೆನು ನಾನು ॥ 5 ॥

ಶೇಷಾವೇಶ ಪ್ರಹ್ಲಾದನ ಅವತಾರನೆನಿಸಿದೆ
ವ್ಯಾಸರಾಯರೆಂಬೊ ಪೆಸರು ನೀನಾಂತೆ
ದೇಶಾಧಿಪಗೆ ಬಂದ ಕುಹುಯೋಗವನು ನೂಕಿ ನೀ ಸಿಂ
ಹಾಸನವೇರಿ ಮೆರೆದೆ ಜಗವರಿಯೆ
ವ್ಯಾಸಾಬ್ಧಿಯನೆ ಕಟ್ಟಿಸಿ ದೇಶದಾ ವೊಳಗೆಲ್ಲ
ಭೂಸುರ ಕೀರ್ತಿಯನು ಪಡದೆ ಗುರುರಾಯಾ
ವಾಸುದೇವ ಪುರಂದರ ವಿಠಲನ್ನ
ದಾಸರೊಳು ಹೆಗ್ಗಳ ಯೆನಿಸಿಕೊಂಡೆ

**ಧ್ರುವ ತಾಳ**

ಸಿರಿ ನಾರಾಯಣ ಯೋಗಿ ಶ್ರೀಪಾದ ರಾಯರಲ್ಲಿ
ವರ ವಿದ್ಯಾಭ್ಯಾಸವ ಮಾಡಿದೆ ನೀನು
ಧರೆಯೊಳು ವಿಜಯೀಂದ್ರ ವಾದಿರಾಜರೆಂಬ
ಪರಮ ಶಿಷ್ಯರ ಪಡೆದು ಮೆರದೆ ಕೀರುತಿಯ
ಸುರೇಂದ್ರರು ಪುತ್ರ ಭಿಕ್ಷೆ ಬೇಡೆ ವಿಜಯೀಂದ್ರನ
ಕರುಣಿಸಿ ಮಠವನುದ್ಧರಿಸಿದ ಕಾರಣ
ಗುರು ವ್ಯಾಸರಾಯರೆ ಪರಮ ಗುರುಗಳು
ಪುರಂದರ ವಿಠ್ಠಲ ಪರದೈವ ಜಗಕೆ ಕಾಣಿರೊ ॥ 6 ॥

ಶ್ರೀ ನಾರಾಯಣ ಯೋಗಿಯಾದ ಶ್ರೀಪಾದರಾಯರೊಳು
ವಿಹಿತವಾದ ವಿದ್ಯಾಭ್ಯಾಸವ ಮಾಡಿದೆ
ನೀನು ಧರೆಯೊಳು ವಿಜಯೀಂದ್ರ ವಾದಿರಾಜರೆಂಬೊ
ಪರಮ ಶಿಷ್ಯರ ಪಡೆದು ಮೆರದೆ ಕೀರ್ತಿಯಾ
ಯೆಲ್ಲ ಸುರೇಂದ್ರ ಪುತ್ರ ಭಿಕ್ಷವ ಬೇಡಿ ವಿಜಯೀಂದ್ರನಾ
ಕರುಣಿಸಿದವನನುದ್ಧರಿಸಿದ ಕಾರಣ
ಗುರು ವ್ಯಾಸರಾಯರು ಪರಮ ಗುರುಗಳು
ಪುರಂದರ ವಿಠಲನೆ ಪರದೈವ ಕಾಣಿರೋ

**ತ್ರಿವಿಡಿ ತಾಳ**

ವರಮಧ್ವ ಮತವೆಂಬ ಸಾಗರದೊಳು ಅವ-
ತರಿಸಿದೆ ಪೂರ್ಣ ಚಂದ್ರಮನಂತೆ ನೀನು
ಧರೆಯೊಳು ಬ್ರಹ್ಮಣ್ಯರ ಕುವರನೆಂದೆನಿಸಿದೆ ನೀನು
ಪುರಂದರ ವಿಠಲನ ಕರುಣವ ಪಡೆದೆ

**ಆದಿತಾಳ**

ಮಾನಸ ಪೂಜೆಯನ್ನು ಮಾಡಿ
ದಾನವಾಂತಕ ರಂಗನ್ನ ಮೆಚ್ಚಿ
ತಾನೆ ಬಂದು ಗೋಪಾಲಕೃಷ್ಣನ ಯೇನೆಂದು ಧ್ಯಾನಿವೆನೋ
ಯೇನೆಂದು ಪೇಳುವೆ ನಿಮ್ಮ ಮಹಿಮೆಯ

| | |
|---|---|
| ಕರುಣಾಕರನವ ಪರನೆಂದು ಅರುಹಲು | ಜ್ಞಾನಿಗಳರಸ ವ್ಯಾಸಮುನಿ ರಾಯಾ |
| ದುರಿತಗಳೆಲ್ಲವ ಪರಿಹರಿಸಿಕೊಂಡೆ ನಾನು ॥ 7 ॥ | ಹೀನ ಜನರು ನಿನ್ನ ಮಾನವನೆಂದು |
| | ನಾನಾ ನರಕಕ್ಕೆ ಉರುಳುವರು |
| | ಶ್ರೀನಿವಾಸ ಪುರಂದರ ವಿಠಲನು |
| | ಆನಂದದಿಂದಲಿ ನಿನ್ನ ಮುಂದೆ |
| | ಗಾನವ ಮಾಡುತ್ತ ಆಡುತ್ತಲಿಪ್ಪನು |
| | ಯೇನು ಮಹಿಮೆಯೋ ದಾವ ಬಲ್ಲನೊ |
| **ಅಟ್ಟ ತಾಳ** | **ಏಕತಾಳ** |
| ಈಸು ಮುನಿಗಳಿದ್ದರೇನು ಮಾಡಿದರಯ್ಯ | ಈಸು ಮುನಿಗಳಿದ್ದೇನು ಮಾಡಿದರು ನಮ್ಮ |
| ವ್ಯಾಸರಾಯ ಮಧ್ವಮತವನುದ್ಧರಿಸಿದ | ವ್ಯಾಸಮುನಿ ಮಧ್ವಮತವನುದ್ಧರಿಸಿ |
| ಕಾಶೀ ಗದಾಧರ ಮಿಶ್ರನ ಸೋಲಿಸಿ | ಕಾಶಿ ಗದಾಧರ ಮಿಶ್ರನ ಸೋಲಿಸಿ |
| ದಾಸನ್ನ ಮಾಡಿಕೊಂಡ ಧಾರುಣಿಯೊಳಗೆ | ದಾಸನ ಮಾಡಿಕೊಂಡೆ ಧಾರುಣಿಯೊಳಗೆ |
| ಕಾಶೀ ಮಿಶ್ರ ಪಕ್ಷಧರ ವಾಜಿಪೇಯ ನಾ- | ಕಾಶಿ ಮಿಶ್ರ ವಕ್ಷಾಧಾರ ವಾಸುದೇವಾ |
| ರಸಿಂಹ ಲಿಂಗಣ ಮಿಶ್ರ ಮೊದಲಾದ ವಿ - | ವಾಲಿಲೇಯ ನಾರಸಿಂಹ ಯೋಗಿ ಲಿಂಗಣ |
| ದ್ವಾಂಸರು ನೂರೆಂಟು ಮಂದಿ ಬರಲು | ಮಿಶ್ರನೇ ಮೊದಲಾದ ವಿದ್ವಾಂಸರು |
| ಜೈಸಿದೆ ಜಯಪತ್ರವ ಕೊಂಡು ಮೆರೆದೆ | ನೂರೆಂಟು ಜಯ ಜಯ ಪತ್ರಿಕೆಯನ್ನು |
| ವಾಸುದೇವ ಗೋಪಾಲಕೃಷ್ಣನಿಗೆ ವಿ - | ವಾಸುದೇವ ಗೋಪಾಲಕೃಷ್ಣನಿಗೆ |
| ಭೂಷಣವನು ಮಾಡಿ ಹಾಕಿಸಿದೆ | ಭೂಷಣವ ಮಾಡಿ ಹಾರಿಸಿದೆ |
| ಶ್ರೀಶ ಪುರಂದರ ವಿಠ್ಠಲ ರಾಯನನು | ಶ್ರೀಶಾ ಪುರಂದರ ವಿಠ್ಠಲನೆ ಈಶಯೆಂದಾ ಬ್ರಹ್ಮಾದಿಗಳಿಗೆ |
| ಈಶ ಬೊಮ್ಮ ಇಂದ್ರಾದಿಗಳಿಗೆ | ಈಶನೆಂದು ಡಂಗುರ ಹೈಸಿ ಮೆರದೆ ಜಗದೊಳಗೆ |
| ಈಶನೆಂದು ಡಂಗುರವ ಪೊಯಿಸಿ ಮೆರೆದೆ ಜಗವರಿಯೆ | |
| ದಾಸರೊಳು ನೀ ಸಮರ್ಥನು ಸಂನ್ಯಾಸಿ ಶಿರೋಮಣಿ ॥ 8 ॥ | |
| **ಆದಿ ತಾಳ** | |
| ಮಾನಸ ಪೂಜೆಯನು ನೀ ಮಾಡೆ | **ಜತೆ** ॥ ............................................ |

ದಾನವಾಂತಕ ರಂಗನು ಮೆಚ್ಚಿ
ತಾನೆ ಬಂದ ಗೋಪಾಲಕೃಷ್ಣ
ಜ್ಞಾನಿಗಳರಸನೆ ಗುರು ವ್ಯಾಸರಾಯ
ಏನೆಂಬೆನು ನಿನ್ನ ಮಹಿಮೆಯನು
ಶ್ರೀನಿವಾಸ ಪುರಂದರ ವಿಠ್ಠಲನ
ಗಾನವ ಮಾಡುತ ಆಡುತ ಪಾಡುತ
ಏನೆಂಬೆ ನಿಮ್ಮ ಮಹಿಮೆಯನಾವ ಬಲ್ಲನು ॥ 9 ॥

**ಜತೆ**

ಗುರು ವ್ಯಾಸರಾಯರ ಚರಣವೆನಗೆ ಗತಿ
ಪುರಂದರ ವಿಠ್ಠಲನ ಅರಿತೆ ಇವರಿಂದ ॥ 10 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಸುಳಾದಿಯಲ್ಲಿ ದಾಸವರ್ಯರು ಮಂಗಳಾಚರಣವನ್ನು ಮಾಡಿದನಂತರ ಭಗವಂತನ ಉಪಾಸನೆಯನ್ನು ಪ್ರಾರಂಭಿಸುತ್ತಾರೆ. ಇದು ಭಗವತ್ಪೂಜೆ. ಪೂಜಾಂಗನಾಗಿ ಆದಿಯಲ್ಲಿ ಗುರು-ನಮಸ್ಕಾರ ಮಾಡುವುದು ವೈದಿಕ ಪರಂಪರೆ.

ಶ್ರೀ ಮಧ್ವಾಚಾರ್ಯರು:

> ಸ್ಮೃತ್ವಾ ಗುರುಂ ಪೂರ್ವ ಗುರುಮಾದಿ ಮೂಲ ಗುರೂಂಸ್ತಥಾ ।
> ದೇವತಾಂ ವಾಸುದೇವಂಚ ವಿದ್ಯಾಭ್ಯಾಸೀತು ಸಿದ್ಧಿಭಾಕ್ ॥

ಎಂದು ತಂತ್ರಸಾರದಲ್ಲಿ, ಗುರುಗಳಿಂದ ವಾಸುದೇವನವರೆಗೆ ಸಾಧಕರು ತಾರತಮ್ಯದಂತೆ ನಮಸ್ಕರಿಸಬೇಕೆಂದು ಹೇಳಿದ್ದಾರೆ. ಈ ಪರಂಪರೆಯಂತೆಯೇ ದಾಸರು ಪ್ರಾರ್ಥನಾ ರೂಪನಾದ ಪೂಜೆಯನ್ನು ಪ್ರಾರಂಭಿಸುತ್ತಾರೆ. ತಮ್ಮ ದೀಕ್ಷಾ ಗುರುಗಳಾದ ಶ್ರೀ ವ್ಯಾಸರಾಜ ಶ್ರೀಪಾದಂಗಳವರನ್ನು ಪ್ರಾರ್ಥಿಸುತ್ತಾರೆ. ಇದೆ ಈ ಸುಳಾದಿಯಲ್ಲಿ ಸೂಚಿಸಿದ್ದಾರೆ.

**೧)** **ಸುಕೃತ** = ಒಳ್ಳೆಯ ಕಾರ್ಯ; ಪುಣ್ಯ

**ಶ್ರೀಶ** = ವಿಷ್ಣು

**ಯೇಸು** = ಎಷ್ಟು, ಗುರುಕೃಪೆ ಒದಗುವುದು ಹಲವಾರು ಜನ್ಮಗಳಲ್ಲಿ ಗಳಿಸಿದ ಪುಣ್ಯದ ಫಲವಾಗಿ ಎಂದು ನಂಬಿಕೆ.

**೨)** **ತಂತ್ರ** = ಮಂತ್ರ ಸಹಿತವಾಗಿ ಮಾಡತಕ್ಕ ಆಗಮೋಕ್ತ ಕ್ರಿಯೆಗಳು

**ಉರಗನ ಉಪವಾಸ** = ಉದ್ವೇಶರಹಿತವಾದ ಕ್ರಿಯೆ. (ಅಭಾವ ವೈರಾಗ್ಯ)

**ಪರ** = ಸರ್ವೋತ್ತಮ

**ಮಹಾಮಂತ್ರ : -** ಅಷ್ಟ ಮಹಾಮಂತ್ರಗಳು ಪ್ರಸಿದ್ಧವಿವೆ : ೧) ಪ್ರಣವ ೨) ಮಾತೃಕ ೩) ಅಷ್ಟಾಕ್ಷರ, ೪) ವ್ಯಾಹೃತಿ, ೫) ದ್ವಾದಶಾಕ್ಷರ, ೬) ಗಾಯತ್ರಿ, ೭) ಪುರುಷಸೂಕ್ತ ಮತ್ತು ೮) ವಿಷ್ಣು ಮಂತ್ರ.

ಈ ಮಂತ್ರಗಳನ್ನು ಗುರೂಪದೇಶ ಪಡೆದು ನ್ಯಾಸ ಸಹಿತವಾಗಿ ಜಪಿಸಬೇಕೆಂದು ತಂತ್ರಸಾರದಲ್ಲಿ ಹೇಳಿದೆ.

**ನ್ಯಾಸ** = ಪ್ರಬಂಧ, ಮುದ್ರೆ, ಇಡುಗಂಟು, ಹೆರವರ ಬಳಿಯಲ್ಲಿ ತನ್ನದಾಗಿರಿಸುವಿಕೆ

**೩.** **ಅಂಕಿತ : -** ತಪ್ತ ಮುದ್ರಾಂಕಿತ, ಗುರುಗಳಿಂದ ಕೊಡಲ್ಪಟ್ಟ ಹೆಸರು, ಗ್ರಂಥ ಕರ್ತನ ಸಂಕೇತ ಪದ.

**ಚಕ್ರಾಂಕಿತವನು ಮಾಡಿ** = ತಪ್ತ ಮುದ್ರೆಯನ್ನು ಕೊಟ್ಟು,

**ಪುರಂದರ ವಿಠ್ಠಲ ಎಂಬ ಅಂಕಿತವೆನಗಿತ್ತ : -** ಪುರಂದರ ವಿಠ್ಠಲ ಅಂಕಿತವನ್ನು ಗುರುಗಳು ಕೊಟ್ಟರೆಂದು ದಾಸರೇ ಹೇಳಿದ್ದಾರೆ.

**೪.** **ನ್ಯಾಯಾಮೃತ,** ತರ್ಕ ತಾಂಡವ, ಚಂದ್ರಿಕಾ ಎಂಬ ನ್ಯಾಯ ಶಾಸ್ತ್ರದ ಮಹಾ ಗ್ರಂಥಗಳನ್ನು ಶ್ರೀ ವ್ಯಾಸರಾಯರು ರಚಿಸಿ, ದ್ವೈತ ಸಿದ್ಧಾಂತದ ಮೂಲಕ ಶ್ರೀ ವ್ಯಾಸರಾಯರಿಗೆ "ಚಂದ್ರಿಕಾಚಾರ್ಯ" ಎಂಬ ಬಿರುದು ಬಂದಿತು.

**ಮಾಯಾವಾದಿ ಮೊದಲಾದಿಪ್ಪತ್ತೊಂದು : -** ಶ್ರೀ ಮಧ್ವಾಚಾರ್ಯರಿಗಿಂತ ಮೊದಲು, ಮಾಯಾವಾದಿ (ಅದ್ವೈತ) ಮೊದಲಾದ ಇಪ್ಪತ್ತೊಂದು ಭಾಷ್ಯಾಕಾರರು ಭಾಷ್ಯ ರಚಿಸಿದ್ದರೆಂದೂ ಇಲ್ಲಿ ಹೇಳಿದ್ದಾರೆ.

**ಮುದ್ರಿಸು** = ಕಟ್ಟು

**ನಾಯಕ** = ಶ್ರೇಷ್ಠ

**೫.** **ಅವತಾರ : -** ದೇವತೆಗಳೆಲ್ಲರೂ ಅಂಶದಿಂದ ಬೇರೆ ರೂಪ (ತಾಳುವುದೇ) ಹೊಂದುವುದೇ ಅವತಾರವು

**ಅಂಶ : -** ಅಂಶದಲ್ಲಿ ಎರಡು ವಿಧ : ಸ್ವರೂಪಾಂಶ ಮತ್ತು ಭಿನ್ನಾಂಶ

**ಸ್ವರೂಪಾಂಶ : -** ಮತ್ಸ್ಯಾದಿ ಅವತಾರಗಳು.

**ಭಿನ್ನಾಂಶ : -** ದೇವತೆಗಳು. ಆಂಶಿಯಲ್ಲಿಯ ಕೆಲ ಗುಣಗಳು ಅಂಶದಲ್ಲಿರುತ್ತವೆ. ಅಂಶದಲ್ಲಿರುವ ಎಲ್ಲ ಗುಣಗಳು ಆಂಶಿಯಲ್ಲಿರುವುವು. ಇಂದ್ರ ಆಂಶಿ, ಅರ್ಜುನ ಅಂಶ. ಇಂದ್ರನಲ್ಲಿ ಅರ್ಜುನನ ಎಲ್ಲಾ ಗುಣಗಳಿದ್ದುವು. ಅರ್ಜುನನಲ್ಲಿ ಇಂದ್ರನ ಎಲ್ಲ ಗುಣಗಳಿರಲಿಲ್ಲ

**ಆವೇಶ : -** ಯಾವುದೇ ದೇವತೆಯ ಕೆಲ ಕಾಲದ ಅಸ್ತಿತ್ವ ವ್ಯಾಸರಾಯರು, ಶೇಷಾವೇಷರೂ ಪ್ರಹಲ್ಲಾದನ ಅವತಾರಿಗಳೂ ಎಂದು ದಾಸರು ಹೇಳಿದ್ದಾರೆ.

**ದೇಶಾಧಿಪತಿ** = ವಿಜಯನಗರದ ರಾಜ ಕೃಷ್ಣದೇವರಾಯ (೧೫೦೯ - ೨೯)

**ಕುಹುಯೋಗ : -** (೮ - ೧ - ೧೫೨೧)

ರಾಹುಣಾರ್ಕಾರ್ಕಿ ಭೂಪುತ್ರಾಹ । ಯದಾ ಚಾಂಡಾಲತಾಂ ಗತಾಃ ॥
ಯಸ್ಯ ದ್ವಾದಶಗಾಸ್ವಾದ್ಯಃ । ಸರಾಜಾ - ನಶ್ಯತಿ ಧ್ರುವಂ ॥
ಎಂದು ಜ್ಯೋತಿಸ್ಸಾರ ಸಂಗ್ರಹಕಾರರು ಕುಹುಯೋಗದ ವಿವರವನ್ನು ಹೇಳಿದ್ದಾರೆ.

**ಅರ್ಥ : -** ರಾಹು, ಸೂರ್ಯ, ಶನಿ, ಮಂಗಳ ಗ್ರಹಗಳು ವಿಷ ಘಳಿಗೆಯಲ್ಲಿ ಚಾಂಡಾಲತ್ವವನ್ನು ಪಡೆದು ಶೂನ್ಯ ಚಂದ್ರ ತಿಥಿ (ಅಮಾವಾಸ್ಯೆ) ಯಲ್ಲಿ ಮಕರ ರಾಶಿಯಲ್ಲಿ ಸಂಧಿಸುವರು. ಇದು ರಾಜರಿಗೆ ಅನಿಷ್ಟಕರವಾದುದು. ಈ ಅವಧಿಯಲ್ಲಿ ವ್ಯಾಸ ಮುನಿಗಳು ಸಿಂಹಾಸನವನ್ನೇರಿ ಕೃಷ್ಣದೇವರಾಯನ ಕುಹುಯೋಗವನ್ನು ನಿವಾರಿಸಿದರು (ವ್ಯಾಸ ಯೋಗಿ ಚರಿತಂ).

**ವ್ಯಾಸಾಬ್ಧಿ =** (ಮದನಪಲ್ಲಿ - ಆಂಧ್ರಪ್ರದೇಶ). ವ್ಯಾಸ ಸಮುದ್ರ. ದೊಡ್ಡ ಕೆರೆಗಳಿಗೆ ಕನ್ನಡದಲ್ಲಿ ಸಮುದ್ರ, ಸಂದ್ರ, ಸಾಗರಗಳೆಂಬ ಹೆಸರುಗಳಿವೆ. ಉ.ದಾ:- ನಾಗಸಂದ್ರ, ಹನುಮಸಾಗರ.

**ಕಾಶೀ ದೇಶ =** ಈಗಿನ ವಾರಣಾಸಿ, ಉತ್ತರ ಪ್ರದೇಶ. ಪ್ರಸಿದ್ಧ ಕ್ಷೇತ್ರ

**ಲೇಶ =** ಸ್ವಲ್ಪ

**ವೆಗ್ಗಳ =** ಶ್ರೇಷ್ಠ

**೬.** **ಈ ಶ್ಲೋಕದಲ್ಲಿ** ಶ್ರೀ ವ್ಯಾಸರಾಯರ ವಿದ್ಯಾ ಗುರುಗಳೂ ಆಶ್ರಮ ಗುರುಗಳೂ ಆದ ಶ್ರೀಪಾದರಾಯರ (೧೪೨೨ - ೧೪೮೦) ಹೆಸರನ್ನು ದಾಸರು ಹೇಳಿದ್ದಾರೆ. ಈ ಪರಂಪರೆಯ ಮಠವು ಮುಳಬಾಗಿಲಿನಲ್ಲಿದೆ. ಶ್ರೀಪಾದರಾಯರು "ನಾರಾಯಣಯೋಗಿ" ಎಂಬ ಹೆಸರು ಇದ್ದಿತೆಂದು ಪುರಂದರ ದಾಸರು ಹಾಡಿದ್ದಾರೆ. (ನಮಃ ಶ್ರೀಪಾದರಾಜಾಯ - ಎಂದು, ದಾಸ ಕೂಟದ ಪರಂಪರೆಯಲ್ಲಿ ಶ್ರೀಪಾದರಾಯರು ಅಗ್ರಸ್ಥಾನವಿದೆ).

**ಶ್ರೀ ವಿಜಯೀಂದ್ರರು** (೧೫೧೪ - ೧೫೯೫) ಶ್ರೀ ವ್ಯಾಸರಾಯರ ಶಿಷ್ಯರು. ಶ್ರೀ ರಾಯರ ಮಠದ ಶ್ರೀ ಸುರೇಂದ್ರರು ತಮ್ಮ ಮಠಕ್ಕೆ ಇವರನ್ನು ಕೊಡಬೇಕೆಂದು ಕೇಳಲು, ಶ್ರೀ ವ್ಯಾಸರಾಯರು ಒಪ್ಪಿ ಪುತ್ರಭಿಕ್ಷೆ ನೀಡಿದರು. ಶ್ರೀ ವಿಜಯೀಂದ್ರರು ಕ್ರಿ.ಶ. ೧೫೩೯ ರಲ್ಲಿ ಆಶ್ರಮವನ್ನು ಸ್ವೀಕರಿಸಿ ಶ್ರೀ ರಾಯರ ಮಠದ ಸಿಂಹಾಸನಾರೂಢರಾದರು. ಗುರುಗಳಾದ ಶ್ರೀ ವ್ಯಾಸರಾಯರಂತೆ ಸುವಿಖ್ಯಾತ ವಿಧ್ವಾಂಸರು. ಇವರು ಸಂಸ್ಕೃತದಲ್ಲಿ ೧೦೪ ಗ್ರಂಥಗಳನ್ನು ರಚಿಸಿರುವರು. ಇಷ್ಟು ಗ್ರಂಥಗಳನ್ನು ತಮ್ಮ ಕಾಲದಲ್ಲಿ ಬೇರೆ ಯಾವ ಯತಿಗಳೂ ಬರೆದಿಲ್ಲ. ಅಪ್ಪಯ ಧೀಕ್ಷಿತರೇ ಮೊದಲಾದ ವಿಧ್ವಾಂಸರನ್ನು ಜಯಿಸಿ, ದ್ವೈತ ಸಿದ್ದಾಂತದ ದುಂದುಭಿಯನ್ನು ಮೊಳಗಿಸಿದರು.

**ಶ್ರೀ ವಾದಿರಾಜರು** (೧೪೮೦ - ೧೬೦೦) ಸೋದೆ ಮಠದ ಶ್ರೀ ವಿಷ್ಣುತೀರ್ಥರ ಪರಂಪರೆಯಲ್ಲಿ ಬಂದ ಯತಿಗಳು. ಶ್ರೀ ವ್ಯಾಸರಾಯರಲ್ಲಿ ವಿದ್ಯಾಭ್ಯಾಸ ಮಾಡಿ ಉದ್ದಾಮ ಪಾಂಡಿತ್ಯ ಪಡೆದರು. ತಮ್ಮ ಕಾಲದ ಶೃಂಗೇರಿ ಮಠದ ಯತಿಗಳನ್ನು ಜಯಿಸಿದರು. ಶೈವ, ಜೈನ, ಪಾಶುಪತಾದಿ ಮತಗಳನ್ನು ಖಂಡಿಸಿ ಹರಿಸರ್ವೋತ್ತಮತ್ವವನ್ನು ಪ್ರಸ್ಥಾಪಿಸಿದರು. ಇವರು ರಚಿಸಿದ ಗ್ರಂಥಗಳು ಸಂಸ್ಕೃತದಲ್ಲಿ ಉಚ್ಚ ಪದವನ್ನು ಹೊಂದಿವೆ. ಅವುಗಳಲ್ಲಿ 'ಯುಕ್ತಿ ಮಲ್ಲಿಕೆ' ಪ್ರಧಾನವಾದುದು. ಶ್ರೀ ಗುರುರಾಜೀಯ ಸುಧಾ ಟಿಪ್ಪಣಿ, ತತ್ವ ಪಕ್ವಾಶಿಕಾ, ಭಾಗವದ್ಗೀತೆಗಳ ಟಿಪ್ಪಣಿಗಳು ಹೆಸರು ಪಡೆದಿವೆ. ಲಕ್ಷಾಭರಣವೆಂಬ ಮಹಾಭಾರತ ಟಿಪ್ಪಣಿ,

ಮಹಾಭಾರತ ತಾತ್ಪರ್ಯ ನಿರ್ಣಯ, ತಂತ್ರಸಾರ, ಟೀಕಾ, ಪ್ರಮೇಯ ಸಂಗ್ರಹ, ರುಕ್ಮಿಣೀಶ ವಿಜಯ, ಸರಸ ಭಾರತೀ ವಿಲಾಸ, ತೀರ್ಥ ಪ್ರಬಂಧ, ಪಾಷಂಡ ಮತ ಖಂಡನ, ಏಕಾದಶಿ ನಿರ್ಣಯ - ಮೊದಲಾದ ಗ್ರಂಥಗಳನ್ನಲದೆ ಶಿವ ಸ್ತುತಿ, ದಶಾವತಾರ ಸ್ತೋತ್ರ ಮುಂತಾದುವನ್ನೂ ಕನ್ನಡದಲ್ಲಿ ಸ್ತ್ರೀಯರಿಗೆ ಸಾಧನೆಗಾಗಿ ಅನೇಕ ಕೃತಿಗಳನ್ನೂ, ವೈಕುಂಠ ವರ್ಣನೆ, ಗುಂಡಕ್ರಿಯೆ, ಲಕ್ಷ್ಮೀ ಶೋಭಾನೆ, ಸಾವಿರಾರು ಕೀರ್ತನೆ, ಸುಳಾದಿ ಸ್ವಪ್ನಗದ್ಯ, ಭ್ರಮರ ಗೀತೆ ಮೊದಲಾದುವುಗನ್ನೂ ರಚಿಸಿ ಜನಾಂಗವನ್ನು ಮೇಲಕ್ಕೆತ್ತಲು ಯೆತ್ನಿಸಿದ ಮಹಾನುಭಾವರು.

೭. **ಬ್ರಹ್ಮಣ್ಯರು : -** ವ್ಯಾಸರಾಯರ ಆಶ್ರಮ ಗುರುಗಳು (೧೪೬೦ - ೧೪೭೮). ವ್ಯಾಸರಾಯರನ್ನು ಹುಟ್ಟಿದಂದಿನಿಂದ ಪಾಲನೆ ಪೋಷಣೆ ಮಾಡಿದವರು. ಬಂಗಾರದ ತಳಿಗೆಯಲ್ಲಿ(ಪರಾತದಲ್ಲಿ) ಮಗುವನ್ನು ಪಡೆದ ಕಥೆ ಸ್ಮರಿಸಿಕೊಳ್ಳಬೇಕು.

**ಸುರೇಂದ್ರ : -** ರಾಯರ ಮಠದ ಪೀಠಸ್ಥರು, ಶ್ರೀ ವ್ಯಾಸರಾಯರ ಸಮಕಾಲೀನರು.

**ಪರಮ ಗುರುಗಳು : -** ಗುರುಗಳ ಗುರುಗಳು. ಶ್ರೀ ವ್ಯಾಸರಾಯರಿಗೆ ನ್ಯಾಯಶಾಸ್ತ್ರ, ಪಾಂಡಿತ್ಯ, ರಾಜಾಶ್ರಯ ಹಾಗು ಪೀಠದ ಬಲಗಳಿದ್ದ ಮೂಲಕ, ತಮ್ಮ ಸಮಕಾಲೀನರಾದ ಅನ್ಯಮತೀಯರಾದ ಕಾಶಿಯ ಗದಾಧರಮಿಶ್ರನನ್ನು ಸೋಲಿಸಿ ಶಿಷ್ಯನನ್ನು ಮಾಡಿಕೊಂಡರು. ಕಾಶಿಯ ಮಿಶ್ರಪಕ್ಷಧರ ಮತ್ತು ದಕ್ಷಿಣದ ವಾಜಪೇಯ ನರಸಿಂಹ, ಲಿಂಗಣಮಿಶ್ರ, ಮೊದಲಾದ ನೂರೆಂಟು ಜನ ವಿಧ್ವಾಮ್ಸರನ್ನು ವಾದದಲ್ಲಿ ಜಯಿಸಿ, "ಹರಿಯೇ ಸರ್ವೋತ್ತಮನು" ಎಂದು ಡಂಗುರ ಸಾರಿದರೆಂದು ದಾಸರು ಬಾಯಿ ತುಂಬಾ ಹೊಗಳಿದ್ದಾರೆ.

**ಮಾನಸ ಪೂಜೆ : -** ಮಾನಸಿಕ ಉಪಚಾರಗಳಿಂದ ಪರಮಾತ್ಮನನ್ನು ಏಕಾಗ್ರತೆಯಿಂದ ಮನದಲ್ಲಿಯೇ ಸೇವಿಸುವುದು.

ಕೆಳಗೆ ಕಾಣಿಸಿದ ವಿಷಯವು ಶ್ರೀ ವ್ಯಾಸರಾಜ ಕೃತ ಶ್ರೀಪಾದರಾಯ ಸ್ತೋತ್ರದಲ್ಲಿ ಉಲ್ಲೇಖಿತವಾಗಿದೆ:

**ಶ್ರೀಪಾದರಾಯರು** ಕನಸಿನಲ್ಲಿ ಪಂಢರಪುರಕ್ಕೆ ಬಂದು ನನ್ನನ್ನು ಕರೆದುಕೊಂಡು ಹೋಗು ಎಂದು ಪರಮಾತ್ಮನ ಆದೇಶವಾಯಿತು. ಅದರಂತೆ ಶ್ರೀಪಾದರಾಜರು ಅಲ್ಲಿಗೆ ಹೋಗಿ ಭೀಮರಥಿಯ ಮರಳು ದಂಡೆಯಲ್ಲಿ ಶೋಧಿಸಿದಾಗ ಅವರಿಗೆ ಎರಡು ಸಂಪುಟಗಳು ದೊರೆತವು. ಒಂದರ ಮುಚ್ಚಳವು ಶ್ರೀಪಾದರಾಜರಿಗೆ ತೆರೆಯಲು ಬಂದಿತು. ಅದರಲ್ಲಿ ರಂಗ ವಿಠ್ಠಲನ ಪ್ರತಿಮೆ ಇದ್ದಿತು. ಅದು ಈಗಲೂ ಅವರ ಮಠದಲ್ಲಿ ಪೂಜೆಗೊಳ್ಳುತ್ತಿದೆ. ಇನ್ನೊಂದು ಸಂಪುಟದ ಮುಚ್ಚಳ ತೆಗೆಯಲು ಬಾರದಿದ್ದರಿಂದ ಅದನ್ನು ಹಾಗೆಯೇ ಪೂಜಿಸುತ್ತಿದ್ದರು. ಒಂದು ದಿನ ಶ್ರೀ ವ್ಯಾಸರಾಯರು ಅದನ್ನು ಪೂಜಿಸುವ ಸಂಧರ್ಭ ಒದಗಿದಾಗ, ಮುಚ್ಚಳವು ಸುಲಭವಾಗಿ ತೆರೆಯಿತು. ಅದರಲ್ಲಿ ಗೋಪಾಲಕೃಷ್ಣನ ಮೂರ್ತಿ ಇದ್ದಿತು. ಶ್ರೀಪಾದರಾಜರು ಇದನ್ನು ಕಂಡು "ಇದೇ ನಿಮ್ಮ ಕೃತಿಗಳ ಅಂಕಿತವಾಗಲಿ" ಎಂದು ಆಶೀರ್ವಾದ ಮಾಡಿದರು. ಆ ಶ್ರೀಕೃಷ್ಣನ ವಿಗ್ರಹವು ಈಗಲೂ ಸೋಸಲೆ ಮಠದಲ್ಲಿದೆ.

**Classification:** Suladi
**Name of Suladi:** vyAsarAya suLAdi
**Ankita:** purandara vittala

**Location:** NA

**Category:** Guru Stuti

**Sub-Category:** Vyasa, padma, janma, Vishnu, Krishna, jnana, snana, Dhyana, japa, tapa, upavasa, deha, muni, nyaya, baayi, madhva, arasa, desha, roga, Samudra, kashi, keerti, Lakshmi, yogi, vidya, putra, puje, purna, Chandra, srinivasa, Ananda, indra, brahma, bhumi,

**Pravachana:** NA

**Explanation:** NA